ಸಾಕ್ಷಿ ಯನ್ನು ದಿಃ 07.02.2026 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದ**

1. ನಾನು ದ್ವಿತೀಯ ಪಿ.ಯು.ಸಿ ಓದಿದ್ದೇನೆ.
2. ನನಗೆ 3-4 ಬ್ಯಾಂಕುಗಳಲ್ಲಿ ಖಾತೆ ಇದೆ. ನಾನು ಬ್ಯಾಂಕಿನ ವ್ಯವಹಾರಗಳನ್ನು 7 ವರ್ಷಗಳಿಂದ ಮಾಡುತ್ತಿದ್ದೇನೆ. ಚೆಕ್ಕಿನ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ ಎಂದರೆ ಸರಿ.
3. ನಿಪಿ -1 ನನ್ನ ಖಾತೆಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ - 1(ಎ)ರ ಸಹಿ ನನ್ನದು ಎಂದರೆ ಸರಿ.
4. ಶ್ರೀಮತಿ ಸಿ. ರವರ ಬಳಿ ಸಾಲ ಪಡೆದಿರುವ ಬಗ್ಗೆ ಗೊತ್ತಿರುವವರು ಯಾರೂ ಇಲ್ಲ. ನಾನು ಅವರಿಗೆ ಚೆಕ್ ಕೊಟ್ಟಿದ್ದನ್ನು ತೋರಿಸಲು ದಾಖಲೆ ಇಲ್ಲ, ನೋಡಿದವರು ಅವರ ಮಗ ವೆಂಕಟೇಶ ಇದ್ದಾರೆ.
5. ಶ್ರೀಮತಿ ಸಿ. ಯವರಿಂದ ನಾನು ನಗದು ಮೂಲಕ ಹಣ ಪಡೆದಿರುತ್ತೇನೆ. ಫರ್ಮಿಗೆ ಹಣ ಪಡೆದಿರುತ್ತೇನೆ.
6. ಫರ್ಮ್ ಗೆ ಯಾರಿಂದಲೂ ಸಾಲ ಪಡೆದರೆ ಆಡಿಟ್ ಅಗೆ ಅದು ನಮೂದಾಗಬೇಕು ಎಂದರೆ, ಸರಿ.
7. ಶ್ರೀಮತಿ ಸಿ. ರವರು ನಿಮ್ಮ ವ್ಯವಹಾರಕ್ಕೆ ಪಾರ್ಟನರ್ ಅಲ್ಲ ಎಂದರೆ ಸರಿ.
8. ನಿಪಿ - 1 ನ್ನು ಫರ್ಮ್ ನ ಪರವಾಗಿ ಕೊಟ್ಟಿದ್ದೀರಾ ಎಂದರೆ, ಇಲ್ಲ ನನ್ನ ಖಾತೆ ಮೂಲಕ ಕೊಟ್ಟಿದ್ದೇನೆ. ಅವರಿಗೆ ಚೆಕ್ ನೀಡಿದ ಬಗ್ಗೆ ಕೌಂಟರ್ ಫೈಲ್ ನಲ್ಲಿ ನಮೂದು ಮಾಡಿದ್ದೀರಾ ಎಂದರೆ, ನನಗೆ ನೆನಪಿಲ್ಲ.
9. ಹಣ ವಾಪಸ್ ನೀಡಿದ ನಂತರ ಅವರಿಂದ ಲಿಖಿತವಾಗಿ ಚೆಕ್ ಹಿಂದಿರುಗಿಸುವ ಬಗ್ಗೆ ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ, ನಾನು ಬರೆಸಿಕೊಂಡಿಲ್ಲ, ಬಾಯಿ ಮಾತಿನಲ್ಲಿ ಕೇಳಿರುತ್ತೇನೆ. ಆ ರೀತಿ ಕೇಳಿದ ದಿನಾಂಕ ಗೊತ್ತಾ ಎಂದರೆ, ಜೂನ್ 2020 ರಂದು ಕೇಳಿದ್ದೆ, ದಿನ ನೆನಪಿಲ್ಲ. ಅವರನ್ನು ಕೇಳಿದ್ದನ್ನು ಅವರ ಮಗ ನೋಡಿದ್ದಾರೆ, ಅವರನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ.
10. ಅವರನ್ನು ಕೇಳಿದಾಗಿನಿಂದ ಈ ಪ್ರಕರಣ ಹಾಕುವವರೆಗೆ ಅವರಿಗೆ ನೊಟೀಸು ನೀಡಿದ್ದಾಗಲಿ, ದೂರು ನೀಡಿದ್ದಾಗಲಿ ಇದೆಯಾ ಎಂದರೆ ಇಲ್ಲ.
11. ಈ ಪ್ರಕರಣದಲ್ಲಿ ನನಗೆ ನೊಟೀಸು ಬಂದಿದೆ. ಅದಕ್ಕೆ ಉತ್ತರ ನೀಡಿಲ್ಲ ಆದರೆ ಠಾಣೆಗೆ ದೂರು ನೀಡಿದ್ದೆ. ನೊಟೀಸು ತಲುಪಿದ 3 ದಿನಗಳ ನಂತರ ದೂರು ನೀಡಿದ್ದೇನೆ.
12. ವೆಂಕಟೇಶ ಹಾಗೂ ಅವರ ಶ್ರೀಮತಿ ಸಿ. ರವರನ್ನು ಠಾಣೆಗೆ ಕರೆಸಿದಾಗ ಅವರಿಗೆ ಹಾಗೂ ಆ

ಚೆಕ್ಕಿಗೆ ಸಂಬಂಧ ಇಲ್ಲ ಎಂದು ಹೇಳಿಕೆ ನೀಡಿದ್ದಾರೆ ಎಂದರೆ ಸರಿ. ನಂತರ ನೀವು ಮಂಗಳೂರು ನ್ಯಾಯಾಲಯದಲ್ಲಿ ಖಾಸಗಿ ದೂರು ನೀಡಿದ್ದೀರಾ ಎಂದರೆ ಸರಿ. ಸದರಿ ಪ್ರಕರಣದ ವಿಚಾರಣೆ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ತಡೆ ಹಿಡಿಯಲಾಗಿದೆ ಎಂದರೆ ಸರಿ.

13. ನಿಮ್ಮ ದೂರಿನಲ್ಲಿ ಅಥವಾ ಖಾಸಗಿ ದೂರಿನಲ್ಲಿ ಚೆಕ್ಕು ಜಂಟಿ ಖಾತೆಗೆ ಸೇರಿದೆ ಎಂದು ನಮೂದು ಮಾಡಿದ್ದೀರಾ ಎಂದರೆ, ಇಲ್ಲ.
14. ನಿಮ್ಮ ಪಾರ್ಟನರ್ ಶೀಪ್ ಡೀಡ್ ನಲ್ಲಿ ಫರ್ಮ್ ಗೆ ಸಾಲ ಪಡೆಯಲಾಗಿದೆ ಎಂದು ಈ ಚೆಕ್ ನಂಬರ್ ಬರೆಯಲಾಗಿದೆಯಾ ಎಂದರೆ ಇಲ್ಲ.
15. ನಮ್ಮ ತಮ್ಮ ನವೀನ ಹಾಗೂ ನಾನು ಚೆನ್ನಾಗಿ ಇದ್ದೇವೆ. ನೀವಿಬ್ಬರೂ ಯಾವ ಕಂಡಿಷನ್ ಮೇರೆಗೆ ಜಂಟಿ ಖಾತೆ ತೆರೆದಿದ್ದೇವೆ ಎಂದು ದಾಖಲೆ ನೀಡಿದ್ದೀರಾ ಎಂದರೆ, ನೆನಪಿಲ್ಲ.
16. ಈ ಪ್ರಕರಣ ದಾಖಲಾದ ನಂತರ ನೀವು ಹೊರದೇಶಕ್ಕೆ ಹೋಗಿದ್ದೀರಾ ಎಂದರೆ, ಹೋಗಿಲ್ಲ.
17. ನಮ್ಮ ವಕೀಲರು ಹಾಕುವ ಅರ್ಜಿಗಳಿಗೆ ನಾನು ಮಾಹಿತಿ ನೀಡುತ್ತೇನೆ ಎಂದರೆ ಸರಿ.
18. ಗುರುತು ಪರಿಚಯ ಇಲ್ಲದವರ ಜೊತೆ ರಾಜಿ ಮಾಡಿಕೊಳ್ಳುವ ಅಭ್ಯಾಸ ಇಟ್ಟುಕೊಂಡಿದ್ದೀರಾ ಎಂದರೆ, ಇಲ್ಲ.
19. ಈ ಪ್ರಕರಣದಲ್ಲಿ ದಿಃ14.03.2025 ರಂದು ನೀವು ರಾಜೀ ಮಾಡಿಕೊಳ್ಳುತ್ತೇವೆ, ಆಗದಿದ್ದರೇ ಪಾಟೀ ಸವಾಲು ಮಾಡಿಕೊಳ್ಳತ್ತೇವೆ ಎಂದು ಅರ್ಜಿ ಹಾಕಿದ್ದೀರಾ ಎಂದರೆ, ನನಗೆ ಗೊತ್ತಿಲ್ಲ.
20. ಜಂಟಿ ಖಾತೆಗೆ ಸೇರಿದ ಚೆಕ್ ಎಂಬ ಕಾರಣಕ್ಕೆ ಪ್ರಕರಣವನ್ನು ವಜಾ ಮಾಡುವಂತೆ ಉಚ್ಚ ನ್ಯಾಯಾಲಯದಲ್ಲಿ ಮನವಿ ಸಲ್ಲಿಸಿದ್ದೀರಾ ಎಂದರೆ ಇಲ್ಲ.
21. ದೂರುದಾರರಿಗೆ ಹಾಗೂ ನಿಮಗೆ ದ್ವೇಷ ಇದೆಯಾ ಎಂದರೆ, ಅವರು ನನಗೆ ಪರಿಚಯವೇ ಇಲ್ಲ ಎಂದು ನುಡಿಯುತ್ತಾರೆ.
22. ದೂರುದಾರರು ಮೈಸೂರು ಹಾಗೂ ಕೊಡಗು ಜಿಲ್ಲೆಗೆ ಕೋಳಿ ಸರಬರಾಜು ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ತಿಂಗಳ ಟರ್ನ್ ಓವರ್ ನನಗೆ ಗೊತ್ತಿಲ್ಲ. ಅವರ ಆರ್ಥಿಕ ಸಾಮರ್ಥ್ಯದ ಬಗ್ಗೆ ನನಗೆ ಗೊತ್ತಿಲ್ಲ.
23. ಬ್ಯಾಂಕಿನಲ್ಲಿ ನಾನು ಒ.ಡಿ ತೆಗೆದುಕೊಂಡಿಲ್ಲ. ಬ್ಯಾಂಕಿನಲ್ಲಿ ವ್ಯವಹಾರ ಚೆನ್ನಾಗಿದ್ದರೆ, ಸಾಲಗಳನ್ನು ನೀಡುತ್ತಾರೆ ಎಂದರೆ ಸರಿ.
24. ಈ ಪ್ರಕರಣದಲ್ಲಿ ದೂರುದಾರರು ಯಾವ ಯಾವ ದಾಖಲೆ ನೀಡಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ, ಇಲ್ಲ.
25. 2023-24 ರಲ್ಲಿ ದೂರುದಾರರ ಬ್ಯಾಂಕಿನ ವ್ಯವಹಾರ 22 ಕೋಟಿಗಿಂತ ಹೆಚ್ಚು ಎಂದರೆ ನನಗೆ ಗೊತ್ತಿಲ್ಲ.

26. 2024-25 ರಲ್ಲಿ ದೂರುದಾರರ ಬ್ಯಾಂಕಿನ ವ್ಯವಹಾರ 77 ಲಕ್ಷಕ್ಕಿಂತ ಹೆಚ್ಚು ಎಂದರೆ ನನಗೆ ಗೊತ್ತಿಲ್ಲ.
27. ಒಂದು ದಿವಸಕ್ಕೆ ನವನೀತ ರವರ ಖಾತೆಗೆ 18 ಲಕ್ಷ ಹಣ ಕೋಳಿ ವ್ಯಾಪಾರದಿಂದ ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.
28. ದೂರುದಾರರು ಎಷ್ಟು ವಾಹನದ ದಾಖಲೆ ನೀಡಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ಅವರ ಬಳಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ಹಾಗೂ ಅವರು ಎಷ್ಟು ಕೋಟಿಯ ಮನೆ ಕಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅವರು ಪರಿಚಯ ಇಲ್ಲದ ಕಾರಣ ನನಗೆ ಗೊತ್ತಿಲ್ಲ.
29. ಶ್ರೀಮತಿ ಸಿ. ರವರು ನನಗೆ 9 ಲಕ್ಷ ಹಣ ನೀಡಿದ ಬಗ್ಗೆ ದಾಖಲೆ ಪಡೆಯಲು ಪ್ರಯತ್ನ ಪಟ್ಟಿದ್ದೀರಾ ಎಂದರೆ ಇಲ್ಲ.
30. ಚೆಕ್ಕು ಎಲ್ಲಿ ಇದೆ ಎಂದು ಗೊತ್ತಿಲ್ಲ ಸಿಕ್ಕಿದಾಗ ಕೊಟ್ಟಿದ್ದೇನೆ ಎಂದು ವೆಂಕಟೇಶರವರು ಹೇಳಿದನ್ನು ನೋಡಿದವರು ಯಾರಾದರೂ ಇದ್ದಾರೆ ಎಂದರೆ, ಅವರ ತಾಯಿ ಇದ್ದರು.
31. ದೂರುದಾರರು, ವೆಂಕಗೇಶ ಹಾಗೂ ನೀವು ಸ್ನೇಹಿತರು ಎಂದರೆ, ವೆಂಕಟೇಶ ಹಾಗೂ ನಾನು ಮಾತ್ರ ಸ್ನೇಹಿತರು.
32. 2020 ರಲ್ಲಿ ಹಣ ವಾಪಸ್ ನೀಡಿದಾಗಿನಿಂದ ಈ ಪ್ರಕರಣದ ಹಾಕುವವರೆಗೆ ಸುಮಾರು 3-4 ಸಾಲ ಚೆಕ್ ವಾಪಸ್ ಕೇಳಿದ್ದೇನೆ ಮತ್ತು ನಮ್ಮ ಪಾರ್ಟನರ್ ಶೀಪ್ ಕೊನೆಯಾದಾಗ ಸಹ ಕೇಳಿರುತ್ತೇನೆ. ಆ ರೀತಿ ಕೇಳಲು ಯಾರನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗಿಲ್ಲ.
33. ಪಾರ್ಟನ್ ಶೀಪ್ ಕೊನೆಯಾದಾಗ ಡಿಸಾಲ್ವ್ ಡೀಡ್ ನಲ್ಲಿ ಚೆಕ್ ಬಗ್ಗೆ ಬರೆಯಲು ತೊಂದರೆ ಇತ್ತಾ ಎಂದರೆ, ಇಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ